ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 248/2020

(ಫ್ರಾಸಾ-6 ಚಾಸಾ-8)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 17.03.2026

| | | |
|---|---|---|
| ಸಾಕ್ಷಿದಾರರ ಹೆಸರು | - | ಸತ್ಯನಾರಾಯಣಪ್ರಕಾಶ್ |
| ತಂದೆಯ ಹೆಸರು | - | ಚಿಕ್ಕ ಆಂಜಿನಪ್ಪ |
| ವಯಸ್ಸು | - | 39 ವರ್ಷ, |
| ಉದ್ಯೋಗ | - | ಫ್ಯಾಕ್ಟರಿಯಲ್ಲಿ ಕೆಲಸ |
| ವಾಸ | - | ಬಿಸುವನಹಳ್ಳಿ, ದೊಡ್ಡಬಳ್ಳಾಪುರ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಈಗ ನಾನು ಒಂದು ದಾಖಲೆ ನೋಡುತ್ತಿದ್ದು ಸದರಿ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲೆ ಪಂಚನಾಮೆ ಇದ್ದು ಅದನ್ನು ನಿಶಾನೆ ಪಿ-1 ಎಂದು ಹಾಗೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಶಾನೆ ಪಿ-1(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ದಿಃ02.05.2020 ರಂದು ಬಿಸುವನಹಳ್ಳಿ ಗ್ರಾಮದಲ್ಲಿ ಸರ್ವೆ ನಂಬರ್ 2/2 ರಲ್ಲಿ ಮಧ್ಯಾಹ್ನ 02.00-03.00 ಘಂಟೆ ಸಮಯದಲ್ಲಿ ಡಿವೈಎಸ್ಪಿರವರು ತನಿಖೆ ಮಾಡಿ ಸ್ಥಳದಲ್ಲಿ ಒಂದು ಇಟ್ಟಿಗೆ, ರಕ್ತ ಕಲೆಯಾಗಿದ್ದ ಸಿಮೆಂಟ್ ಕಲರ್ ಶರ್ಟ್, ರಕ್ತಕಲೆಯಾಗಿದ್ದ ಬಿಳಿ ಬಣ್ಣದ ಬನಿಯನ್ ಅನ್ನು ಅಮಾನತುಪಡಿಸಿಕೊಂಡು ಒಂದು ಚೀಲದಲ್ಲಿ ಹಾಕಿ ಪ್ಯಾಕ್ ಮಾಡಿ ಸಾಕ್ಷಿದಾರರಾಗಿ ನನ್ನ ಹಾಗೂ ಚಾಸಾ-2, 4 ಮತ್ತು 5 ರವರ ಸಹಿಗಳನ್ನು ಸ್ಥಳದಲ್ಲಿ ಪಡೆದರು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ-1 ಇಟ್ಟಿಗೆಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಮುಂದಿರುವ ಸೀಲ್ ಮಾಡಿದ ವಸ್ತುಗಳನ್ನು ತೆರೆಯಲು ಅನುಮತಿ ಕೋರಿದ್ದು ಅವುಗಳು ಸೀಲ್ ಆಗಿದ್ದು ತೆರೆಯಲು ಅನುಮತಿ ನೀಡಲಾಯಿತು)

ಈಗ ನಾನು ನ್ಯಾಯಾಲಯದ ಮುಂದೆ ಇರುವ ರಕ್ತ ಕಲೆಯಾಗಿದ್ದ ಸಿಮೆಂಟ್ ಕಲರ್ ಶರ್ಟ್, ರಕ್ತಕಲೆಯಾಗಿದ್ದ ಬಿಳಿ ಬಣ್ಣದ ಬನಿಯನ್ ಅನ್ನು ನೋಡಿ ಗುರುತಿಸಿದ್ದು

ಅವುಗಳನ್ನು ಮು.ಮಾ-2 ಮತ್ತು 3 ಎಂದು ಗುರುತಿಸಲಾಯಿತು. ಮು.ಮಾ-1 ರಿಂದ 3 ಚೀಲಗಳ ಮೇಲೆ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಲಾಗಿದೆ. ಸಾಕ್ಷಿ ಸದರಿ ಸಹಿಗಳನ್ನು ನೋಡಿ ಗುರುತಿಸಿದ್ದು ಮು.ಮಾ-1(ಎ) ರಿಂದ 3(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ</u>** ಆರೋಪಿತರ ಪರ ಶ್ರೀಮತಿ ಡಿಎಂಜಿ ವಕೀಲರು ಪಾಟೀ ಸವಾಲು ಮಾಡಲು ಮಧ್ಯಾಹ್ನದ ಅವಧಿಯವರೆಗೆ ಕಾಲಾವಕೋಶ ಕೋರಿದ್ದು ಮುಂದೂಡಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**<u>ಸಾಕ್ಷಿಗೆ ಮಧ್ಯಾಹ್ನ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆಟಿವಿ ವಕೀಲರಿಂದಃ</u>**

2. ನನಗೆ ಸತೀಶ್ ಎಂದೂ ಸಹ ಊರಿನಲ್ಲಿ ಕರೆಯುತ್ತಾರೆ. ಪಂಚನಾಮೆಗೆ ಹಾಜರಾಗುವಂತೆ ಪೋಲಿಸರು ನನಗೆ ಲಿಖಿತ ನೋಟೀಸ್ ನೀಡಿರಲಿಲ್ಲ. ನಾನು ಸ್ಥಳದಲ್ಲಿ ಪಂಚನಾಮೆ ಮಾಡುವಾಗ ಹಾಜರು ಇದ್ದುದ್ದರಿಂದ ನನಗೆ ಪಂಚರಾಗಲು ಪೋಲಿಸರು ಕರೆದರು. ಪಂಚನಾಮೆಯನ್ನು ಪೋಲಿಸರು ಮಾಡಿದ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ.

3. ಪಂಚನಾಮೆ ಮಾಡಿದ ಸ್ಥಳ ಹಾಗೂ ಗಾಯಾಳು ನಾಗರಾಜು ಇವರ ಮನೆ ನಡುವೆ 100-150 ಅಡಿ ಅಂತರ ಇರುತ್ತದೆ. ನಾಗರಾಜ್ ಇವರ ಮನೆಯ ಮುಂಬಾಗಿಲು ಪೂರ್ವದ ಕಡೆಗೆ ಇರುತ್ತದೆ. ನಾಗರಾಜ್ ಇವರ ಮನೆಯ ಉತ್ತರಕ್ಕೆ ಗಂಗ ಮತ್ತು ರಾಮೇಶ್ ಇವರ ಮನೆ ಇರುತ್ತದೆ.

4. ಪಂಚನಾಮೆ ಮಾಡಿದ ಸ್ಥಳದ ಪಶ್ಚಿಮಕ್ಕೆ ಅವರದ್ದೇ ಜಮೀನು ಇರುತ್ತದೆ, ಅದರ ಪಕ್ಕದಲ್ಲಿ ಮನೆ ಇದ್ದು ಅದು ಯಾರದ್ದು ಎಂದು ಗೊತ್ತಿಲ್ಲ ಆದರೆ ಅವರನ್ನು ಗೌಡ್ರು ಎಂದು ಕರೆಯುತ್ತಾರೆ. ನಾನು ಪರಿಶಿಷ್ಟ ಜಾತಿಗೆ ಸೇರಿದವನಾಗಿರುತ್ತೇನೆ. ಹೇಮ ಮತ್ತು ನಾಗರಾಜ್ ನನ್ನ ಸಂಬಂಧಿಕರಲ್ಲ. ಪಂಚನಾಮೆ ಮಾಡಿದ ಸ್ಥಳದಿಂದ ನನ್ನ ಮನೆ ಸುಮಾರು 200-250 ಅಡಿ ಅಂತರದಲ್ಲಿ ಇರುತ್ತದೆ. ತಾವು ಆ ದಿನ ಕೆಲಸಕ್ಕೆ ಹೋಗಿರಲಿಲ್ಲವೋ ಎಂದು ಕೇಳಲಾಗಿ ಕರೋನ ಸಮಯದಲ್ಲಿ ಶನಿವಾರ ಮತ್ತು ಭಾನುವಾರ ರಜೆ ಇದ್ದು ಪಂಚನಾಮೆ ಮಾಡಿದ ದಿನ ಶನಿವಾರ ಇತ್ತು ಎಂದು ಹೇಳುತ್ತಾರೆ. ಪಂಚನಾಮೆ ಮಾಡಿದ ಸ್ಥಳವು ಸರ್ವೆ ನಂಬರ್ 2/2 ಎಂದು ಹೇಗೆ ಗೊತ್ತು ಎಂದು ಕೇಳಲಾಗಿ ಸಾಕ್ಷಿಯು ಅದೇ ಸರ್ವೆ ನಂಬರ್ ನಲ್ಲಿ ದೇವಸ್ಥಾನವಿದ್ದು ಅದಕ್ಕೆ ದಾರಿಯ ವಿಚಾರವಾಗಿ ನಾನು ಹಾಗೂ ಉಳಿದ ಊರಿನವರು ತಾಲ್ಲೂಕು ಕಛೇರಿಗಳಿಗೆ ಓಡಾಡಿದ್ದರಿಂದ ಪಂಚನಾಮೆ ಮಾಡಿದ ಸ್ಥಳದ ಸರ್ವೆ ನಂಬರ್ ನನಗೆ ಗೊತ್ತು. ಸದರಿ ಸರ್ವೆ ನಂಬರ್ 2/2 ನಾಗರಾಜ್ ಇವರಿಗೆ ಸೇರಿದ್ದು ಇದೆ. ನಾಗರಾಜ್ ಇವರ ಮನೆಯಿಂದ ಸದರಿ ದೇವಸ್ಥಾನದ ನೂರು ಅಡಿ ಅಂತರದಲ್ಲಿ ಇರುತ್ತದೆ. ಪಂಚನಾಮೆ ಮಾಡಿದ ಸ್ಥಳದ ದಕ್ಷಿಣಕ್ಕೆ ರಸ್ತೆ ಇದ್ದು ಅದರ ಪಕ್ಕದಲ್ಲಿ ಲೇಔಟ್ ಇರುತ್ತದೆ.

5. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ಸ್ಥಳಕ್ಕೆ ಬಂದಿರುವುದಿಲ್ಲ ಹಾಗೂ ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಹಾಗೂ ಮು.ಮಾ-1 ರಿಂದ 3 ಅನ್ನು ಜಪ್ತಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ಗಾಯಾಳು ನಾಗರಾಜು ಪರಿಶಿಷ್ಟ ಜಾತಿಗೆ ಸೇರಿದವರಾದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು